ಬೈಂದೂರು-ಸೋಮೇಶ್ವರ ಕಡಲು ತೀರದ ಅಭಿವೃದ್ಧಿ

1217(724) ಶ್ರೀ ಗೋಪಾಲ ಪೂಜಾರಿ ಕೆ.(ಬೈಂದೂರು) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೈಂದೂರು-ಸೋಮೇಶ್ವರ ಕಡಲು ತೀರವನ್ನು ಪ್ರವಾಸ ಕೇಂದ್ರವೆಂದು ಪರಿಗಣಿಸಿದ್ದು, ಇದರ ಅಭಿವೃದ್ಧಿಗೆ ಸರ್ಕಾರ ಹಮ್ಮಿಕೊಂಡ ಕಾರ್ಯಕ್ರಮಗಳೇನು?

ಆ) ಕೂಡಲೇ ಈ ಕೇಂದ್ರವನ್ನು ಅಭಿವೃದ್ಧಿಪಡಿಸಲಾಗುವುದೇ; ಅಥವಾ ಅಭಿವೃದ್ಧಿಪಡಿಸಲು ತೊಂದರೆಗಳೇನಾದರೂ ಇದೆಯೇ?

ಶ್ರೀ ಆರ್.ವಿ. ದೇಶ್‌ಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ಬೈಂದೂರು-ಸೋಮೇಶ್ವರ ಕಡಲು ತೀರವನ್ನು ಸರ್ಕಾರವು ಪ್ರವಾಸಿ ಕೇಂದ್ರವೆಂದು ಪರಿಗಣಿಸಿಲ್ಲ. ಇದನ್ನು ಅಭಿವೃದ್ಧಿ ಪಡಿಸಲು ರೂ. 48.50 ಲಕ್ಷಗಳ ಅಂದಾಜು ವೆಚ್ಚದ ಯೋಜನೆಯನ್ನು ಕಡಲ ತೀರ ಸಮಗ್ರ ಅಭಿವೃದ್ಧಿ ಯೋಜನೆ ಅಡಿಯಲ್ಲಿ ತೆಗೆದುಕೊಳ್ಳಲು ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಆ) ಈ ಯೋಜನೆಗೆ ಭಾರತ ಸರ್ಕಾರದ ನೆರವು ದೊರೆತ ನಂತರ ಇಲ್ಲಿ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲಾಗುವುದು. ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಮುನ್ನ ಕಡಲ ತೀರ ನಿಯಂತ್ರಣ ಕಾಯ್ದೆಯ ನಿಯಮಗಳನ್ನು ಪಾಲಿಸಬೇಕಾಗಿರುತ್ತದೆ.

ಬೈಂದೂರು ಬಿತ್ತನೆಣೆಯನ್ನು ಪ್ರವಾಸ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವುದು

1218(725) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕುಂದಾಪುರ ತಾಲ್ಲೂಕು ಬೈಂದೂರು ಬಿತ್ತಿನೆಣೆಯಲ್ಲಿ ಅರಣ್ಯ ಇಲಾಖೆಯ ಅಡಿಯಲ್ಲಿ ಬರುವ ಕ್ಷಿತಿಜ ನೇಸರಧಾಮವನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡಲು ಜಿಲ್ಲಾಧಿಕಾರಿ, ಉಡುಪಿ ಇವರ ಮುಖಾಂತರ ಪ್ರವಾಸೋದ್ಯಮ ಇಲಾಖೆಗೆ ಅನುದಾನ ಕೋರಿ ಪ್ರಸ್ತಾವನೆ ಸಲ್ಲಿಸಿರುವುದು ನಿಜವೇ?

ಆ) ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಇಲಾಖೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್.ವಿ. ದೇಶ್‌ಪಾಂಡೆ, (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ಹೌದು

ಆ) ಈ ಯೋಜನೆಗೆ ಆರ್ಥಿಕ ನೆರವು ಕೋರಿ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ.

ಬೈಂದೂರು ಬಿತ್ತಿನೆಣೆ ಕ್ಷಿತಿಜ ನೇಸರಧಾಮಕ್ಕೆ ರಸ್ತೆಯ ಡಾಂಬರೀಕರಣ ಮಾಡುವುದು

1219(726) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) : ಮಾನ್ಯ ಅರಣ್ಯ,ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕುಂದಾಪುರ ತಾಲ್ಲೂಕು ಬೈಂದೂರು ಬಿತ್ತಿನೆಣೆಯಲ್ಲಿ ಅರಣ್ಯ ಇಲಾಖೆಯಲ್ಲಿ ಬರುವ ಕ್ಷಿತಿಜ ನೇಸರಧಾಮಕ್ಕೆ ರಾಷ್ಟ್ರೀಯ ಹೆದ್ದಾರಿ 17 ರಿಂದ ಸೂರ್ಯಮಾನ ಕೇಂದ್ರದವರೆಗೆ ಒಂದು ಕಿ.ಮೀ. ಉದ್ದಕ್ಕೆ ರಸ್ತೆ ಡಾಂಬರೀಕರಣ ಮಾಡಲು ಉದ್ದೇಶಿಸಿರುವ ವಿಚಾರ ಯಾವ ಹಂತದಲ್ಲಿದೆ.?

ಅ) ಯಾವಾಗ ಕಾರ್ಯರೂಪಕ್ಕೆ ತರಲಾಗುವುದು?

ಶ್ರೀ ಕೆ.ಹೆಚ್. ರಂಗನಾಥ್(ಅರಣ್ಯ,ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಕ್ಷಿತಿಜ ನೇಸರಧಾಮಕ್ಕೆ ರಾಷ್ಟ್ರೀಯ ಹೆದ್ದಾರಿ 17ರಿಂದ ಒಟ್ಟು 2.1 ಕಿ.ಮೀ ಉದ್ದವಿದ್ದು, ಅದರಲ್ಲಿ 0.750 ಕಿ.ಮೀ. ಉದ್ದಕ್ಕೆ ಡಾಂಬರೀಕರಣ ಮಾಡಲಾಗಿದೆ. ಈ ಕೆಲಸವನ್ನು ಲಭ್ಯವಿರುವ ಸಂಸತ್ ಸದಸ್ಯರ ನಿಧಿಯಿಂದ ನಿರ್ವಹಿಸಲಾಗಿದೆ.

ಆ) ಇತರೆ ಯಾವುದಾದರೂ ಅನುದಾನ ಬಂದಲ್ಲಿ ಉಳಿದ, ಡಾಂಬರೀಕರಣ ಕೆಲಸವನ್ನು ಪೂರ್ಣಗೊಳಿಸಲಾಗುವುದು.

ಹಿರಿಯೂರಿನಲ್ಲಿ ಆರ್.ಕೆ. ಪವರ್‌ಜನ್ ಕಂಪನಿ ಕುರಿತು

1220(1945) ಶ್ರೀ ಗುರುಸ್ವಾಮಿ ಎ.ಎಸ್(ಚಾಮುಂಡೇಶ್ವರಿ) : ಮಾನ್ಯ ಅರಣ್ಯ,ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನಲ್ಲಿ ಆರ್.ಕೆ.ಪವರ್ ಜನ್ ಕಂಪನಿಯು ಉರುವಲು ವಿದ್ಯುತ್ತ ಕೇಂದ್ರ ಸ್ಥಾಪಿಸಲು ಮುಂದೆ ಬಂದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ, ಸದರಿ ಪವರ್ ಕಂಪನಿಯು ಕಾರ್ಯ ಪ್ರಾರಂಭಿಸುವ ಮೊದಲು ಪರಿಸರ ಇಲಾಖೆಯಿಂದ ಎನ್.ಒ.ಸಿಯನ್ನು ಪಡೆದುಕೊಂಡಿದೆಯೆ? ಹಾಗೂ ಪರಿಸರ ಇಲಾಖೆಯವರು ಅನುಮೋದಿಸಿದ ರೀತ್ಯ ಕಂಪನಿಯು ಸ್ಥಾಪಿತವಾಗಿರುತ್ತದೆಯೇ?

3) ಈ ಪವರ್ ಕಂಪನಿಯು ಪರಿಸರ ಕಾನೂನುಗಳನ್ನೇನಾದರೂ ಉಲ್ಲಂಘಿಸಿದೆಯೇ?

4) ಹಾಗಿದ್ದಲ್ಲಿ, ಸರಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಕೆ.ಹೆಚ್.ರಂಗನಾಥ್(ಅರಣ್ಯ,ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

1) ಹೌದು

2) ಹೌದು

3) ಇಲ್ಲ

4) ಉದ್ಭವಿಸುವುದಿಲ್ಲ

ಮೈಸೂರಿನಲ್ಲಿ ಪರಿಸರ ಸಂಪನ್ಮೂಲ ಕಾರ್ಯಕ್ರಮಗಳ ಅನುಷ್ಠಾನ

1221(1946) ಶ್ರೀ ಗುರುಸ್ವಾಮಿ ಎ.ಎಸ್.(ಚಾಮುಂಡೇಶ್ವರಿ) : ಮಾನ್ಯ ಅರಣ್ಯ,ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ತಾ 11.10.1999ರಿಂದ ಈವರೆವಿಗೆ ವಿವಿಧ ಪರಿಸರ ಸಂಬಂಧ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಅಂತರರಾಷ್ಟ್ರೀಯ ಸಂಸ್ಥೆಗಳಿಂದ ಬಂದಿರುವ ಸಹಾಯ ಧನ ಎಷ್ಟು?

2) ಇದರಲ್ಲಿ ಯಂತ್ರ ಸಾಮಗ್ರಿಗಳ ರೂಪ ಎಷ್ಟು? ಹಣದ ರೂಪದಲ್ಲಿ ಎಷ್ಟು;ಎಲ್ಲವನ್ನೂ ಇಲಾಖೆ ಉಪಯೋಗಿಸಿಕೊಂಡಿದೆಯೆ;

3) ಮೈಸೂರಿನ ಪರಿಸರ ಇಲಾಖೆಯ ಗೋಡೌನ್‌ನಲ್ಲಿ ಹೊರ ದೇಶಗಳಿಂದ ಬಂದಿರುವ ಯಾಂತ್ರಿಕ ಸಾಮಗ್ರಿ ಉಪಯೋಗ ಇಲ್ಲದೆ ಇಟ್ಟಿರುವುದು ಗಮನಕ್ಕೆ ಬಂದಿದೆಯೆ; ಬಂದಿದ್ದರೆ, ಇದನ್ನು ಬಳಕೆಗೆ ತೊಡಗಿಸಲು ಕೈಗೊಂಡಿರುವ ಕ್ರಮ ಏನು?

4) ನೀರು, ಗಾಳಿ ಮತ್ತು ಶಬ್ದ ಮಾಲಿನ್ಯ ತಡೆಗೆ ಇರುವ ಕಾನೂನನ್ನು ಜಾರಿಗೆ ತರುವ ಕಾರ್ಯಕ್ರಮವನ್ನು ಖಾಸಗೀಕರಣಗೊಳಿಸಲು ಸರ್ಕಾರ ಬಯಸಿದೆಯೆ?